ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ
Karnataka State Rural Development and Panchayat Raj University

ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ– 582 101
Raitha Bhavana, General Cariappa Circle, Gadag – 582 101
E-mail: ksrdpru@gmail.com Phone: 08372-230338, Fax: 08372-297343

**ದಿನಾಂಕ: 23.07.2021 ರಂದು ಮದ್ಯಾಹ್ನ 02.00 ಗಂಟೆಗೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ರೈತಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ, ಇಲ್ಲಿ ಜರುಗಿದ ಏಳನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳು:**

1. ಪ್ರೊ. ವಿಷ್ಣುಕಾಂತ್‌ಎಸ್.ಚಟಪಲ್ಲಿ — ಅಧ್ಯಕ್ಷರು
   ಕುಲಪತಿಗಳು
2. ಪ್ರೊ. ಡಾ॥ ಆರ್. ಎಸ್. ದೇಶಪಾಂಡೆ, — ಸದಸ್ಯರು
   ಮಾಜಿ ನಿರ್ದೇಶಕರು, ಸಾಮಾಜಿಕ ಮತ್ತು ಆರ್ಥಿಕ ಸಂಸ್ಥೆ (ISEC), ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು
3. ಡಾ. ರಾಜೇಂದ್ರ ಪ್ರಸಾದ, — ಸದಸ್ಯರು
   ಕುಲಪತಿಗಳು,
   ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ಜಿ.ಕೆ.ವಿ.ಕೆ. ಬೆಂಗಳೂರು–560 065
4. ಪ್ರೊ. ಟಿ. ವಿ. ಕಟ್ಟಿಮನಿ, — ಸದಸ್ಯರು
   ಕುಲಪತಿಗಳು,
   ಆಂಧ್ರ ಪ್ರದೇಶ ಕೇಂದ್ರೀಯ ಬುಡಕಟ್ಟು ವಿಶ್ವವಿದ್ಯಾಲಯ, ವಿಜಯನಗರಂ ಆಂಧ್ರ ಪ್ರದೇಶ
5. ಶ್ರೀ ಜಿ. ಬಿ. ಶಿವರಾಜ್, — ಸದಸ್ಯರು
   ಉಪಾಧ್ಯಕ್ಷರು, ಗಾಂಧಿ ಭವನ, ಬೆಂಗಳೂರು,
6. ಡಾ॥ ಅರುಣ್ ಆರ್ ಪಾಟೀಲ್, — ಸದಸ್ಯರು
   ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು
7. ಶ್ರೀ ಅಬ್ದುಲ್ ಹಕೀಮ್, — ಸದಸ್ಯರು
   ಸಾಮಾಜಿಕ ಕಾರ್ಯಕರ್ತರು, ಶಿಕ್ಷಣ ತಜ್ಞರು ಮತ್ತು ಬರಹಗಾರರು ಬೆಂಗಳೂರು
8. ಪ್ರೊ. ಡಾ॥ ಕೆ. ಎಂ. ಹನುಮಂತರಾಯಪ್ಪ, — ಸದಸ್ಯರು
   ನಿವೃತ ಪ್ರಾಂಶುಪಾಲರು, ವಿಶ್ವವಿದ್ಯಾಲಯ ಕಾನೂನು ಕಾಲೇಜು
   ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು
9. ಡಾ॥ ಪ್ರಕಾಶ ಭಟ್, — ಸದಸ್ಯರು
   ಮಾಜಿ ಸಿ.ಇ.ಓ., ಸೊಸೈಟಿ ಫಾರ್ ಕಮ್ಯೂನಿಟಿ ಪಾರ್ಟಿಸಿಪೇಶನ್ ಅಂಡ್
   ಎಂಪವರ್‌ಮೆಂಟ್ (SCOPE), ಧಾರವಾಡ,

9. ಪ್ರೊ. ಬಿ.ಎಲ್. ಲಕ್ಕಣ್ಣವರ ಕುಲಸಚಿವರು — ಸದಸ್ಯ ಕಾರ್ಯದರ್ಶಿಗಳು

**ಸಭೆಗೆ ಗೈರಾದ ಸದಸ್ಯರುಗಳು:**

1. ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ — ಸದಸ್ಯರು
2. ಶ್ರೀ ಬಿ. ಜಿ. ಗೋವಿಂದಪ್ಪ, ಮಾಜಿ ಶಾಸಕರು, — ಸದಸ್ಯರು
3. ಶ್ರೀ ಎನ್. ಶಿವಣ್ಣ, ನಿರ್ದೇಶಕರು (ಪ್ರಭಾರ), ಸಂಶೋಧನೆ, ಅನ್ವೇಷಣೆ ಹಾಗೂ ಮೌಲ್ಯಮಾಪನ ಕೇಂದ್ರ, ಕೆ.ಎಸ್.ಆರ್.ಡಿ.ಪಿ.ಆರ್.ಯು., ಗದಗ. — ಸದಸ್ಯರು
4. ಶ್ರೀಮತಿ ಎನ್. ಜಮುನಾ ಅರಸ್, ಗೃಹ ವಿಜ್ಞಾನಿ (ನಿವೃತ್ತಿ), ಜೆ.ಎಸ್.ಎಸ್. ಕೃಷಿ ವಿಜ್ಞಾನ ಕೇಂದ್ರ, — ಸದಸ್ಯರು
5. ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
6. ಪ್ರಧಾನ ಕಾರ್ಯದರ್ಶಿಗಳು, ಕೃಷಿ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
7. ಪ್ರಧಾನ ಕಾರ್ಯದರ್ಶಿಗಳು, ಸಮಾಜ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
8. ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು
9. ಪ್ರಧಾನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿ ಕಟ್ಟಡ, ಬೆಂಗಳೂರು — ಸದಸ್ಯರು

ಮಾನ್ಯ ಕುಲಸಚಿವರಾದ ಪ್ರೊ. ಬಿ.ಎಲ್. ಲಕ್ಕಣ್ಣವರ ರವರು ಏಳನೇ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ಸದಸ್ಯರನ್ನು ಆತ್ಮೀಯವಾಗಿ ಸ್ವಾಗತಿಸಿದರು. ಕಾರ್ಯಸೂಚಿಯನ್ನು ಕೈಗೆತ್ತಿಕೊಳ್ಳುವ ಮುಂಚೆ, ಕುಲಪತಿಗಳಿಗೆ ವಿಶ್ವವಿದ್ಯಾಲಯದಲ್ಲಿ ಹಮ್ಮಿಕೊಂಡ ಚಟುವಟಿಕೆಗಳ ಕುರಿತು ವಿವರಿಸಲು ಕೋರಿದರು.

ಮಾನ್ಯ ಕುಲಪತಿಗಳು ಪ್ರೊ.ವಿಷ್ಣುಕಾಂತ್ ಎಸ್.ಚಟಪಲ್ಲಿಯವರು ಪ್ರಥಮವಾಗಿ, ಎಲ್ಲ ಸದಸ್ಯರಿಗೆ ಗುರು ಪೂರ್ಣಿಮೆಯ ಹಾಗೂ ಟೋಕಿಯೋ ಒಲಿಂಪಿಕ್ಸ್ 2021 ಕ್ರೀಡಾಕೂಟದಲ್ಲಿ ಭಾರತದಿಂದ ಪ್ರತಿನಿಧಿಸುತ್ತಿರುವ ಕ್ರೀಡಾಪಟುಗಳಿಗೆ ಎಲ್ಲರ ಪರವಾಗಿ ಶುಭಾಶಯ ಕೋರಿದರು. ನಂತರ ಪ್ರಕಟನೆ ವಿಭಾಗದಿಂದ ಪ್ರಕಟಗೊಂಡಿರುವ ಗ್ರಾಮೋದಯ ತ್ರೈಮಾಸಿಕ ಪತ್ರಿಕೆಯ ಸಂಚಿಕೆ 2 ನ್ನು ಸದಸ್ಯರಾದ ಪ್ರೊ. ಡಾ॥ ಕೆ. ಎಂ. ಹನುಮಂತರಾಯಪ್ಪ ರವರು ಬಿಡುಗಡೆಗೊಳಿಸಿದರು.

ತದ ನಂತರ ವಿಶ್ವವಿದ್ಯಾಲಯದಲ್ಲಿ ಕಳೆದ ಆರು ತಿಂಗಳಿನಲ್ಲಿ ಕೈಗೊಂಡ ಕಾರ್ಯ ಚಟುವಟಿಕೆಗಳ ಬಗ್ಗೆ ಹಾಗೂ ಪ್ರಮುಖವಾಗಿ ಕೋವಿಡ್ ಸಮಯದಲ್ಲಿ ವಿಶ್ವವಿದ್ಯಾಲಯದಲ್ಲಿ ಕೈಗೊಂಡ ಕಾರ್ಯಕ್ರಮಗಳ

ಬಗ್ಗೆ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಸದಸ್ಯರುಗಳಿಗೆ ಸಂಕ್ಷಿಪ್ತವಾಗಿ PPT ಯ ಮೂಲಕ ವಿವರಿಸಿದರು.

ಕೋವಿಡ್ –19 ನಿಂದಾಗಿ 2021 ಮಾರ್ಚ್‌ನಿಂದ ದೇಶವ್ಯಾಪಿ 2ನೇ ಅಲೆಯ ಸಂಕಷ್ಟವನ್ನು ಎದುರಿಸುತ್ತಿರುವ ಸಂದಿಗ್ಧ ಪರಿಸ್ಥಿತಿಯಲ್ಲಿ ಹಲವು ರೀತಿಯ ತೊಂದರೆಗಳನ್ನು ಬಳಲುತ್ತಿರುವ ಗದಗ ಜಿಲ್ಲೆಯ ಜನರಿಗೆ ಸಹಾಯ ಒದಗಿಸಲು ವಿಶ್ವವಿದ್ಯಾಲಯದ ಖಜಾನೆಯಿಂದ ಒಂದು ರೂಪಾಯಿಯನ್ನು ಖರ್ಚು ಮಾಡದೇ ಕೇವಲ ದೇಣಿಗೆಯ ಸಹಾಯದಿಂದ ಸುಮಾರು 14 ಸಾವಿರ ಜನಗಳಿಗೆ ಅನ್ನದಾನ ಹಾಗೂ ಜಾನುವಾರಗಳಿಗೆ ಸುಮಾರು 25 ಟನ್ ಮೇವುದಾನವನ್ನು ಮಾಡಲಾಯಿತು ಮತ್ತು ಕೋವಿಡ್ ಸೋಂಕಿತರಿಗೆ ಹಾಗೂ ಅವರ ಕುಟುಂಬಸ್ಥರಿಗೆ ಸಾಧ್ಯವಾದ ಸಾಂತ್ವಾನ, ಪರಿಹಾರ ಒದಗಿಸುವ ನಿಟ್ಟಿನಲ್ಲಿ ಜಿಲ್ಲಾಡಳಿತದ ಜೊತೆಗೂಡಿ, ವಿಶ್ವವಿದ್ಯಾಲಯದಲ್ಲಿ ಗದಗ ಜಿಲ್ಲೆಯ "ಕೋವಿಡ್ ವಾರ್ ರೂಮ್" (ನೆರವು ಸಹಾಯವಾಣಿ)ಸ್ಥಾಪಿಸಿದುದರ ಕುರಿತು ವಿವರಿಸದರು. ವಿಶ್ವವಿದ್ಯಾಲಯವು ಜಿಲ್ಲಾ ಆಯುಶ್ ಇಲಾಖೆ ಮತ್ತು ಯುತ್ ಫಾರ್ ಸೇವಾ (NGO) ಜತೆಗೂಡಿ ಹೋಮ್ ಕ್ವಾರಂಟೈನ್ ಇರುವವರಿಗೆ ಔಷಧಿ ಕಿಟ್ ಗಳನ್ನು ವಿತರಿಸಲಾಗಿರುವ ಕುರಿತು ಹೇಳಿದರು. ಇದಲ್ಲದೆ, ಆನ್ಲೈನ್ ಯೋಗ ಶಿಬಿರ, ರಕ್ತದಾನ ಶಿಬಿರಗಳನ್ನು, ಅನೇಕ ವೆಬಿನಾರಗಳನ್ನು ಹಮ್ಮಿಕೊಂಡಿರುವ ಕುರಿತು ವಿವರಿಸಿದರು. ಮುಂದುವರೆದು ಕೋವಿಡ್ ಲಸಿಕೆ ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಗದಗ ತಾಲೂಕಿನ ಹರ್ತಿ ಗ್ರಾಮ ಪಂಚಾಯಿತಿ ಜೊತೆಗೂಡಿ ಕೋವಿಡ್ ಲಸಿಕಾ ಆಂದೋಲನ ಹಮ್ಮಿಕೊಳ್ಳಲಾಗಿತ್ತು. ಮತ್ತು ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಕೋವಿಡ್ ಲಸಿಕೆ ಹಾಕಿಸಿಕೊಳ್ಳುವ ಬಗ್ಗೆ ಅರಿವು ಮೂಡಿಸುತ್ತಿದೆ ಎಂದು ವಿವರಿಸಿದರು.

ಇದಲ್ಲದೆ, ದೇಶಿ ಯೋಜನೆ, ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ, ಸಮಗ್ರ ಪಶು ಕೃಷಿ ಯೋಜನೆ ಅಡಿ ದೇಸಿ ಗೋವು ಶಾಲೆಯ ಕಾರ್ಯಚಟುವಟಿಕೆಗಳ ಕುರಿತು ವಿವರಿಸಿದರು. ಪ್ರಸ್ತುತ ವರ್ಷದಲ್ಲಿ ಅನುಷ್ಠಾನಗೊಳಿಸಬೇಕಿರುವ ಜೈವಿಕ ಇಂಧನ ಯೋಜನೆ, ಖಾದಿ ಮತ್ತು ಗ್ರಾಮೀಣ ಕೈಗಾರಿಕೋದ್ಯಮ ಆಯೋಗದ ಸಹಯೋಗದಲ್ಲಿ ತೆಗೆದುಕೊಳ್ಳಬೇಕಾದ **SFURTI ಯೋಜನೆ,** ಜೀವ ವೈವಿಧ್ಯ ಉದ್ಯಾನ ಇತ್ಯಾದಿಗಳ ಕುರಿತು ಸಭೆಯ ಗಮನಕ್ಕೆ ತಂದರು. ಮುಂದುವರೆದು ಹೊಸ ಶಿಕ್ಷಣ ನೀತಿ–2020 ನ್ನು ವಿಶ್ವವಿದ್ಯಾಲಯದಲ್ಲಿ ಜಾರಿಗೋಳಿಸಲು ಹಮ್ಮಿಕೊಂಡಿರುವ ವಿವಿಧ ಕಾರ್ಯಗಾರದ ಕುರಿತು ಮಾಹಿತಿ ನೀಡಿದರು. ಕೊನೆಗೆ ವಿಶ್ವವಿದ್ಯಾಲಯದ ಆಶೋತ್ತರಗಳನ್ನು ಈಡೇರಿಸುವಲ್ಲಿ ಎಲ್ಲಾ ಸದಸ್ಯರ ಸಲಹೆ ಮತ್ತು ಬೆಂಬಲವನ್ನು ಕೋರಿದರು.

ಸದಸ್ಯರಾದ ಪ್ರೋ.ಟಿ.ವಿ.ಕಟ್ಟಿಮನಿ ರವರು ವಿಶ್ವವಿದ್ಯಾಲಯದಿಂದ ಹಮ್ಮಿಕೊಂಡಿರುವ ದೇಶಿ ಯೋಜನೆ, ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ, ಸಮಗ್ರ ಪಶು ಕೃಷಿ ಯೋಜನೆ ಅಡಿ ದೇಸಿ ಗೌ ಶಾಲೆಯ ಕಾರ್ಯಚಟುವಟಿಕೆಗಳು ಮತ್ತು ಕೋವಿಡ್ ಸಮಯದಲ್ಲಿ ವಿಶ್ವವಿದ್ಯಾಲಯದಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಹರ್ಷ ವ್ಯಕ್ತಪಡಿಸಿ ವಿಶ್ವವಿದ್ಯಾಲಯದ ಎಲ್ಲ ಸಿಬ್ಬಂದಿ ವರ್ಗಕ್ಕೆ ಅಭಿನಂದನೆ ಸಲ್ಲಿಸಿದರು. ಮುಂದುವರೆದು, ವಿಶ್ವವಿದ್ಯಾಲಯದ ಹಸಿರೀಕರಣ ಯೋಜನೆಗೆ ಇನ್ನೂ ಹಲವಾರು ಬಗೆಯ ತಳಿಗಳನ್ನು ಬೆಳೆಸಲು ಸೂಚಿಸಿ ಈ ತರದ ಈಗಾಗಲೇ ಬೆಳೆದ ಸಸ್ಯಗಳು ಆಂಧ್ರ ಪ್ರದೇಶದ ಸಸ್ಯ ಶಿಶುಪಾಲನಾ ಕೇಂದ್ರಗಳಲ್ಲಿ ದೊರಕುತಿದ್ದು ಅವುಗಳನ್ನು ವಿಶ್ವವಿದ್ಯಾಲಯಕ್ಕೆ ಒದಗಿಸಿಕೊಡುವದಾಗಿ ಸಭೆಗೆ ತಿಳಿಸಿದರು.

ಸದಸ್ಯರಾದ ಪ್ರೊ. ಡಾ॥ ಕೆ. ಎಂ. ಹನುಮಂತರಾಯಪ್ಪ, ರವರು ವಿಶ್ವವಿದ್ಯಾಲಯವು ಒಂದು ಯುವ ವಿಶ್ವವದ್ಯಾಲಯವಾಗಿದ್ದು, ವಿಶ್ವವಿದ್ಯಾಲಯವು ಒಳ್ಳೆಯ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡಿದೆ ಎಂದು ತಿಳಿಸಿದರು. ಮುಂದುವರೆದು. ವಿಶ್ವವಿದ್ಯಾಲಯವು ವಿದ್ಯಾರ್ಥಿಗಳು ಗಾಂಧೀಜಿಯವರ ತತ್ವಾದರ್ಶಗಳನ್ನು

ಪಾಲಿಸುವ ಹಾಗಾಗಲಿ ಮತ್ತು ಇನ್ನಷ್ಟು ಸೇವಾ ಮನೋಧರ್ಮ ಬೆಳೆಸಲು ಕ್ರಮ ಕೈಗೊಳ್ಳುವಂತೆ ಸಲಹೆ ನೀಡಿದರು.

ಸದಸ್ಯರಾದ ಶ್ರೀ ಜಿ.ಬಿ. ಶಿವರಾಜು ರವರು ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಹರ್ಷ ವ್ಯಕ್ತಪಡಿಸಿ ಕಾರ್ಯಕ್ರಮಗಳ ಯಶಸ್ವಿಗೊಳಿಸಲು ಸಿಬ್ಬಂದಿ ವರ್ಗದ ಉತ್ಸಾಹ ಮತ್ತು ಸಮರ್ಪಣಾ ಭಾವನೆಯೊಂದಿಗೆ ಕಾರ್ಯನಿರ್ವಹಿಸುವಿಕೆಗೆ ಮೆಚ್ಚುಗೆ ವ್ಯಕ್ತಪಡಿಸಿದರು ಮತ್ತು ವಿಶ್ವವಿದ್ಯಾಲಯದ ಎಲ್ಲ ಸಿಬ್ಬಂದಿ ವರ್ಗಕ್ಕೆ ಅಭಿನಂದನೆ ಸಲ್ಲಿಸಿದರು.

ಡಾ. ಅರುಣ ಪಾಟೀಲ ರವರು ಮಾತನಾಡುತ್ತಾ, ವಿಶ್ವವಿದ್ಯಾಲಯದಲ್ಲಿ ಕೈಗೊಂಡ ಕಾರ್ಯಕ್ರಮಗಳ ಬಗ್ಗೆ ಸಂತಸ ವ್ಯಕ್ತಪಡಿಸಿ ಮಾನ್ಯ ಕುಲಪತಿಗಳು ಒಬ್ಬ ಒಳ್ಳೆ ನಾಯಕರಾಗಿದ್ದು ವಿಶ್ವವಿದ್ಯಾಲಯದ ಬೆಳವಣಿಗೆಗಾಗಿ ಎಲ್ಲರನ್ನು ಒಗ್ಗೂಡಿಸಿ ಮುನ್ನಡೆಸುವ ಸಾಮರ್ಥ್ಯ ಹೊಂದಿದ್ದಾರೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಡಾ.ಪ್ರಕಾಶ ಭಟ್ ಅವರು ಮಾತನಾಡುತ್ತಾ ವಿಶ್ವವಿದ್ಯಾಲಯದ ಪ್ರತಿಯೊಬ್ಬ ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಜ್ಞಾನವನ್ನು ಪಡೆಯುವುದಲ್ಲದೇ, ಒಳ್ಳೆಯ ಪ್ರಜೆಯಾಗಿ ರೂಪುಗೊಳ್ಳುವಂತೆ ಮಾಡಲು ಕೌಶಲ್ಯಾಭಿವೃದ್ಧಿಯನ್ನು/ ಪ್ರಾತ್ಯಕ್ಷಿಕೆಯನ್ನು ನೀಡಲು ತಿಳಿಸಿದರು. ಮುಂದುವರೆದು, ವಿಶ್ವವಿದ್ಯಾಲಯದ ಹೊಸ ಆವರಣದಲ್ಲಿ ನಿರ್ಮಾಣಗೊಂಡಿರುವ ಜೈವಿಕ ಇಂಧನ ಕೇಂದ್ರದ ಸುತ್ತಲೂ ಜೈವಿಕ ಇಂಧನಕ್ಕೆ ಬೇಕಾಗಿರುವ ಸಸ್ಯಗಳನ್ನು ಬೆಳೆಸಬಹುದಾಗಿದೆ ಎಂದು ತಿಳಿಸಿದರು. ಜೊತೆಗೆ ವಿಶ್ವವಿದ್ಯಾಲಯದಲ್ಲಿ ಬೆಳೆಸಲಾಗುತ್ತಿರುವ ಔಷಧೀಯ, ತೋಟಗಾರಿಕೆ ಇತರೆ ಗಿಡಗಳ ಪುಸ್ತಕಗಳನ್ನು ಹೊರತರಲು ಸಲಹೆ ನೀಡಿದರು.

ಸದಸ್ಯರಾದ ಡಾ॥ ಆರ್. ಎಸ್. ದೇಶಪಾಂಡೆ, ರವರು ಕೂಡಾ ವಿಶ್ವವಿದ್ಯಾಲಯದ ಕಾರ್ಯವೈಖರಿ ಬಗ್ಗೆ ಸಂತಸ ವ್ಯಕ್ತಪಡಿಸಿದರು.

ಸದಸ್ಯರಾದ ಡಾ॥ ರಾಜೇಂದ್ರ ಪ್ರಸಾದ ರವರು ಮಾತನಾಡುತ್ತಾ, ವಿಶ್ವವಿದ್ಯಾಲಯದ ಕಾರ್ಯವು ತೃಪ್ತಿಕರವಾಗಿರುವುದಾಗಿ ತಿಳಿಸಿದರು. ಸಾಧ್ಯವಿದ್ದರೆ ನಕ್ಷತ್ರ ವನವನ್ನು ಬೆಳೆಸಲು ಹಾಗೂ ಗಡಿಭಾಗಗಳಲ್ಲಿ ಹಣ್ಣಿನ ಗಿಡಗಳನ್ನು ಬೆಳೆಸಲು ಕ್ರಮ ಜರುಗಿಸಬಹುದಾಗಿ ವಿವರಿಸಿದರು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯವು ಮಾದರಿ ಸಸ್ಯ ಶಿಶುಪಾಲನಾ ಕೇಂದ್ರಕ್ಕೆ ಸಂಬಂಧಿಸಿದಂತೆ ತರಬೇತಿ ಮತ್ತು ಸಲಹೆ ಸೂಚನೆ ನೀಡಲು ಸಿದ್ದವಿರುವುದಾಗಿ ತಿಳಿಸಿದರು.

ಮಾನ್ಯ ಕುಲಪತಿಗಳು ಪ್ರೊ.ವಿಷ್ಣುಕಾಂತ್ ಎಸ್.ಚಟಪಲ್ಲಿಯವರು ಎಲ್ಲ ಸದಸ್ಯರ ಅಭಿಪ್ರಾಯಕ್ಕೆ ಧನ್ಯವಾದಗಳನ್ನು ತಿಳಿಸಿ, ವಿಶ್ವವಿದ್ಯಾಲಯದ ಆಶೋತ್ತರಗಳನ್ನು ಈಡೇರಿಸುವಲ್ಲಿ ಸಲಹೆ ಮತ್ತು ಬೆಂಬಲವನ್ನು ಕೋರಿದರು.

ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗೆ ಹಾಜರಾದ ಸದಸ್ಯರು ಸಭೆಯ ದಿನದಂದು ಮುಂಜಾನೆ ವಿಶ್ವವಿದ್ಯಾಲಯದ ನೂತನ ಆವರಣದಲ್ಲಿ ಕೈಗೊಂಡಿರುವ ವಿಸ್ತರಣಾ ಚಟಿವಟಿಕೆಗಳಾದ ದೇಶಿ ಯೋಜನೆ, ಮಾದರಿ ಸಸ್ಯ ಶಿಶುಪಾಲನಾ ಕೇಂದ್ರ, ಸಮಗ್ರ ಪಶು ಕೃಷಿ ಯೋಜನೆ ಅಡಿ ದೇಸಿ ಗೌ ಶಾಲೆಯ ಹಾಗೂ ಸಬರಮತಿ ಆಶ್ರಮದ ವಿಕ್ಷಣೆ ಮಾಡಿ ಕೈಗೊಂಡಿರುವ ಕಾರ್ಯಚಟುವಟಿಕೆಗಳಿಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಎಲ್ಲ ಸದಸ್ಯರುಗಳಿಂದ ಸ್ಮೃತಿ ವನದಲ್ಲಿ ಸಸಿ ನೆಡಲಾಯಿತು. .

ನಂತರ ಸಭೆಯ ಕಾರ್ಯಸೂಚಿ ಕೈಗೆತ್ತಿಕೊಳ್ಳಲಾಯಿತು.

**ವಿಷಯ ಸಂಖ್ಯೆ 1: ದಿನಾಂಕ 09-04-2021 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಸ್ಥಿರೀಕರಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 09-04-2021 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡಾವಳಿಗಳನ್ನು ಎಲ್ಲಾ ಸದಸ್ಯರಿಗೆ ಕಳುಹಿಸಿಕೊಡಲಾಗಿದೆ. ಸದರಿ ನಡವಳಿಗಳಿಗೆ ಸದಸ್ಯರಿಂದ ಆಕ್ಷೇಪಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡಾವಳಿಗಳು ಸ್ಥಿರೀಕರಣಗೊಂಡಂತಾಗಿವೆ. (ನಡವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ).

:: **ನಿರ್ಣಯ**::

ದಿನಾಂಕ 09-04-2021 ರಂದು ಜರುಗಿದ ವಿಶೇಷ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ನಡವಳಿಗೆ ಸದಸ್ಯರಿಂದ ಆಕ್ಷೇಪಣೆಗಳು ಅಥವಾ ತಿದ್ದುಪಡಿಗಳು ಬಾರದೇ ಇರುವುದರಿಂದ ನಡಾವಳಿಗಳು ಸ್ಥಿರೀಕರಿಸಲಾಯಿತು.

**ವಿಷಯ ಸಂಖ್ಯೆ 2 : ದಿನಾಂಕ 09-04-2021 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗನುಸಾರ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಪರಿಗಣಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 09-04-2021 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಿಗನುಸಾರ ಕ್ರಮಗಳ ಬಗ್ಗೆ ಅನುಸರಣಾ ವರದಿಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿಗಾಗಿ ಮಂಡಿಸಲಾಗಿದೆ. (ಅನುಸರಣಾ ವರದಿಯ ಪ್ರತಿಯನ್ನು ಲಗತ್ತಿಸಲಾಗಿದೆ).

:: **ನಿರ್ಣಯ**::

ಮಾನ್ಯ ಕುಸಚಿವರು ಅನುಸರಣಾ ವರದಿ ಮಂಡಿಸಿದರು. ಮಾನ್ಯ ಕುಲಪತಿಗಳು ಕಾರ್ಯನಿರ್ವಾಹಕ ಪರಿಷತ್ತಿನ ವಿಶೇಷ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳಾನುಸಾರ ಕ್ರಮಗಳನ್ನು ತೆಗೆದುಕೊಂಡಿರುವ ಬಗ್ಗೆ ಸಭೆಗೆ ವಿವರವಾಗಿ ತಿಳಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯು ಅನುಸರಣಾ ವರದಿಯನ್ನು ಗಮನಿಸಿ ಅನುಮೋದಿಸಿತು.

**ವಿಷಯ ಸಂಖ್ಯೆ 3: ದಿನಾಂಕ 08-07-2021 ರಂದು online virtual meeting mode ನಲ್ಲಿ ಜರುಗಿದ 6ನೇ ಹಣಕಾಸು ಸಮಿತಿ ಸಭೆಯ ನಡವಳಿಗಳನ್ನು ಪರಿಗಣಿಸಿ ಅನುಮೋದಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 08-07-2021 ರಂದು ಅಪರಾಹ್ನ 11.00 ಗಂಟೆಗೆ **online virtual meeting mode** ನಲ್ಲಿ ಜರುಗಿದ 6ನೇ ಹಣಕಾಸು ಸಮತಿಯ ಸಭೆಯ ನಡವಳಿಗಳನ್ನು ಕಾರ್ಯನಿರ್ವಾಹಕ

ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. (ನಡವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ).

**:: ನಿರ್ಣಯ::**

ಸದರಿ ವಿಷಯದ ಬಗ್ಗೆ ಮಾನ್ಯ ಹಣಕಾಸು ಅಧಿಕಾರಿಗಳು ಮೊದಲಿಗೆ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಗೆ ಮಾಹೆಯಾನ ವಿವಿಧ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿನ ಆರಂಭಿಕ ಶಿಲ್ಕು, ಖರ್ಚು ಮತ್ತು ಉಳಿಕೆ ಮೊತ್ತವನ್ನು (Monthly Statement of Receipts and Expenditure) ಸಭೆಯ ಮುಂದೆ ಹಣಕಾಸು ಅಧಿಕಾರಿಗಳು ವಿವರಿಸಿ ಹೇಳಿದರು. 6ನೇ ಹಣಕಾಸು ಸಮಿತಿಯ ಸಭೆಯಲ್ಲಿ ನಡೆದ ಚರ್ಚೆ ಮತ್ತು ಸಭೆಯ ನಡಾವಳಿ ಕುರಿತು ಸಭೆಗೆ ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಹಾಗೂ ಹಣಕಾಸು ಸಮಿತಿಯ ಸದಸ್ಯರಾದ ಪ್ರೋ.ಜಿ ಬಿ. ಶಿವರಾಜು ಮಾತನಾಡುತ್ತಾ, ಸಭೆಯಲ್ಲಿ ವಿಷಯಗಳನ್ನು ಸಮರ್ಪಕವಾಗಿ ಮಂಡನೆ ಮಾಡಲಾಯಿತು. ಇದೊಂದು ಒಳ್ಳೆಯ ಬೆಳವಣಿಗೆ ಎಂದು ವಿವರಿಸಿದರು. ಮುಂದುವರಿದು ಪ್ರೋ.ಹನುಮಂತರಾಯಪ್ಪ ರವರು ವಿಶ್ವವಿದ್ಯಾಲಯವು ಎಲ್ಲ ರೀತಿಯ ಚಟುವಟಿಕೆಗಳನ್ನು ವಿಶ್ವವಿದ್ಯಾಲಯದ ಕಾಯ್ದೆ ಹಾಗೂ ಕಾನೂನು ಪರಿದಿಯಲ್ಲಿ ನಿರ್ವಹಿಸಲು ಸೂಚಿಸಿದರು.

ಮಾನ್ಯ ಸದಸ್ಯರಾದ ಡಾ. ಆರ್.ಎಸ್. ದೇಶಪಾಂಡೆ ಮಾತನಾಡುತ್ತಾ ಹಣಕಾಸು ಸಮಿತಿಯ ಸದಸ್ಯರಿಗೆ ಅಭಿನಂದಿಸುತ್ತಾ 6ನೇ ಹಣಕಾಸು ಸಮಿತಿಯ ಸಭೆಯನ್ನು ಚೆನ್ನಾಗಿ ನಡೆಸಲಾಯಿತು ಎಂದು ಸಭೆಗೆ ವಿವರಿಸಿದರು.

ಹಣಕಾಸು ಅಧಿಕಾರಿಗಳು, ಹೊರಗುತ್ತಿಗೆ ಸಿಬ್ಬಂದಿಗಳ ವೇತನ ಹೆಚ್ಚಳ ಕುರಿತು, ಶೈಕ್ಷಣಿಕ ಪರಿಷತ್ತಿನ ಸಭೆಯಲ್ಲಿ, ಅದರ ಸದಸ್ಯರಾದ ಡಾ.ಮೀನಾಕ್ಷಿ ಸುಂದರಂ, ಇವರು ನೀಡಿದ ಸಲಹೆಗಳನ್ನು ಹಾಗೂ ನಡೆದ ಚರ್ಚೆಯ ಬಗ್ಗೆ ಸಭೆಗೆ ಸವಿಸ್ತಾರವಾಗಿ ವಿವರಿಸಿ ಹೇಳಿದರು. ಇದರ ಕುರಿತಂತೆ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಸಲಹೆಗಳನ್ನು ಕೇಳಿದರು. ಇದಕ್ಕೆ ಪ್ರೊ.ಟಿ.ವಿ.ಕಟ್ಟಿಮನಿ ಇವರು ಸಿಬ್ಬಂದಿಗಳಿಗೆ ಅನುಕೂಲವಾಗುವಂತೆ ನಿಯಮಾನುಸಾರ ಮಂಜೂರಾದ ಹುದ್ದೆಗಳಿಗೆ, ವೇತನ ಹೆಚ್ಚಿಸಲು ಸೂಕ್ತ ಕ್ರಮ ಜರುಗಿಸಲು ತಿಳಿಸಿದರು. ಪ್ರೊ.ರಾಜೇಂದ್ರ ಪ್ರಸಾದ ಇವರು ಮಾತನಾಡುತ್ತ, ಕನಿಷ್ಟ ವೇತನಕ್ಕಿಂತ ಹೆಚ್ಚಿಗೆ ವೇತನ ಪಾವತಿಸುವ ಕುರಿತಂತೆ, ಟೆಂಡರ್ ದಾಖಲಾತಿಯಲ್ಲಿ ಸೂಕ್ತ ಅವಕಾಶ ಕಲ್ಪಿಸುವ ಕುರಿತು ಕ್ರಮ ಜರುಗಿಸಬಹುದೆ ಎಂದು ವಿಚಾರಿಸಲು ತಿಳಿಸಿದರು. ಕುಲಪತಿಗಳು ಇದರ ಕುರಿತಂತೆ, ಸೂಕ್ತವಾಗಿ ಪರಿಶೀಲಿಸಿ ಇನ್ನೊಂದು ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ತಿಳಿಸಿದರು.

ಸದರಿ ಹಣಕಾಸು ಸಮಿತಿ ಸಭೆಯ ನಡಾವಳಿಗಳನ್ನು ಪರಿಶೀಲಿಸಿ ಕಾರ್ಯನಿರ್ವಾಹಕ ಪರಿಷತ್ತು ಸಭೆ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸಂಖ್ಯೆ 4: ದಿನಾಂಕ 05-03-2021 ಶುಕ್ರವಾರದಂದು ಮಧ್ಯಹ್ನಾ 2.00 ಗಂಟೆಗೆ, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಬೆಂಗಳೂರಿನ ಪ್ರಾದೇಶಿಕ ಕಚೇರಿಯಲ್ಲಿ, ನೇಮಕಾತಿ ಪ್ರಕ್ರಿಯೆಯ ಕುರಿತು ನಡೆದ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಪರಿಗಣಿಸಿ ಅನುಮೋದಿಸುವ ಕುರಿತು.**

**ಪರಾಮರ್ಶನ ಟಿಪ್ಪಣಿ:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಸನ್ 2017-18 ನೇ ಸಾಲಿನಿಂದ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದೆ. ವಿಶ್ವವಿದ್ಯಾಲಯಕ್ಕೆ ಯಾವುದೇ ಕಾಯಂ ಬೋಧಕ ಬೋಧಕೇತರ ಸಿಬ್ಬಂದಿಗಳು ಇರದೇ, ಗುತ್ತಿಗೆ/ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡು ಕಾರ್ಯಚಟುವಟಿಕೆಗಳನ್ನು ಮುನ್ನಡೆಸಿಕೊಂಡು ಬಂದಿರುತ್ತದೆ. ಮುಂದುವರೆದು ವಿಶ್ವವಿದ್ಯಾಲಯಕ್ಕೆ ಈಗಾಗಲೇ ಸರ್ಕಾರದಿಂದ ಹಲವು ಬೋಧಕ ಹಾಗೂ ಬೋಧಕೇತರ ಹುದ್ದೆಗಳು ಮಂಜೂರಾಗಿರುತ್ತವೆ. ಈ ಮಂಜೂರಾದ ಹುದ್ದೆಗಳ ನೇಮಕಾತಿ ಪ್ರಕ್ರಿಯೆಗೆ ಸರ್ಕಾರದ ನಿಯಮಾನುಸಾರ ನಿಯಮಗಳನ್ನು ರಚಿಸುವ ಕುರಿತು ಸಲಹಾ ಸಮಿತಿಯನ್ನು ರಚಿಸಲಾಗಿದ್ದು, ನೇಮಕಾತಿ ಪ್ರಕ್ರಿಯೆಯ ಕುರಿತಂತೆ ದಿನಾಂಕ: 05-03-2021 ರಂದು ಬೆಂಗಳೂರಿನ ಪ್ರಾದೇಶಿಕ ಕಚೇರಿಯಲ್ಲಿ ಜರುಗಿಸಲಾಗಿತ್ತು. ಸದರಿ ಸಲಹಾ ಸಮಿತಿ ಸಭೆಯ ನಡವಳಿಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. (ನಡವಳಿಗಳ ಪ್ರತಿಯನ್ನು ಲಗತ್ತಿಸಲಾಗಿದೆ).

:: ನಿರ್ಣಯ::

ಮಾನ್ಯ ಕುಲಪತಿಗಳು ಸದರಿ ಸಭೆಯ ಕುರಿತು ವಿವರವಾಗಿ ಸಭೆಗೆ ತಿಳಿಸಿದರು. ಇದರ ಕುರಿತು ವಿವರವಾದ ಪ್ರಸ್ತಾವನೆ ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ತಿಳಿಸಿದರು. ನಮ್ಮ ವಿಶ್ವವಿದ್ಯಾಲಯವು ಮುಂದಿನ ದಿನಗಳಲ್ಲಿ NAAC ಮಾನ್ಯತೆ ಹಾಗೂ ಯು.ಜಿ.ಸಿಯ 12(b) ಅಡಿ ಅರ್ಹತೆ ಪಡೆಯಲು ಗುರಿ ಹೊಂದಿದ್ದು ಅದಕ್ಕೆ ಬೇಕಾದ ಅರ್ಹತಾ ಮಾನದಂಡಗಳಿಗನುಸಾರ ಹೆಚ್ಚುವರಿ ಹುದ್ದೆಗಳನ್ನು ಅವಶ್ಯಕತೆಗೆ ಅನುಗುಣವಾಗಿ ಬೋಧಕ ಸಿಬ್ಬಂದಿ ಹಾಗೂ ಬೋಧಕೇತರ ಸಿಬ್ಬಂದಿಗಳ ಪ್ರಸ್ತಾವನೆಯನ್ನು ಪ್ರತ್ಯೇಕವಾಗಿ ಸಲ್ಲಿಸಲಾಗುವುದು ಎಂದು ವಿವರಿಸಿದರು. ಪ್ರೊ.ಕಟ್ಟಿಮನಿ ಇವರು ಮಾತನಾಡುತ್ತ, ಯು.ಜಿ.ಸಿ. ಯಿಂದ ಅನುದಾನ ಸ್ವೀಕರಿಸಬೇಕಾದರೆ, ಖಾಯಂ ನೌಕರರ ಅವಶ್ಯಕತೆ ಇರುತ್ತದೆ, ಆದ ಕಾರಣ ಇದನ್ನು ಸರ್ಕಾರದ ಗಮನಕ್ಕೆ ತಂದು, ಮುಂದಿನ ಪ್ರಕ್ರಿಯೆ ಜರುಗಿಸಲು ತಿಳಿಸಿದರು.

ಸದರಿ ಸಲಹಾ ಸಮಿತಿ ಸಭೆಯ ನಡಾವಳಿಗಳನ್ನು ಪರಿಶೀಲಿಸಿ ಕಾರ್ಯನಿರ್ವಾಹಕ ಪರಿಷತ್ತು ಸಭೆ ಸರ್ವಾನುಮತದಿಂದ ಅನುಮೋದಿಸಿತು.

**ವಿಷಯ ಸಂಖ್ಯೆ 5 : ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವಾರ್ಷಿಕ ವರದಿ 2020-21 ಯ ಪರಿಗಣನೆ ಹಾಗೂ ಅನುಮೋದನೆ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯ ಅಧಿನಿಯಮ, 2016 ರ ಪ್ರಕರಣ 62 (1) ಅಡಿಯಲ್ಲಿ ಮಾಡಿದ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ ರಾಜ್ ವಿಶ್ವವಿದ್ಯಾಲಯದ ವಾರ್ಷಿಕ ವರದಿ ವಿನಿಮಯಗಳು, 2018 ರ ಪ್ರಕರಣ 3(2) ರನ್ವಯ ಮಾನ್ಯ ಕುಲಪತಿಗಳು ವಿಶ್ವವಿದ್ಯಾಲಯದ ಹಣಕಾಸು ವರ್ಷದ ಚಟುವಟಿಕೆಗಳನು (ಗುರಿ ಮತ್ತು ಸಾಧನೆಗಳನ್ನು ತೋರಿಸುವ) ಹಾಗೂ ಎಲ್ಲಾ ವಿವರಗಳನ್ನು ಒಳಗೊಂಡ ವಾರ್ಷಿಕ ವರದಿಯನ್ನು ಸಿದ್ಧಪಡಿಸಿ ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆ ಪಡೆದು ರಾಜ್ಯ ಸರ್ಕಾರಕ್ಕೆ ಸಲ್ಲಿಸಬೇಕಾಗಿದೆ. 2020-21

ಸಾಲಿನ ವಾರ್ಷಿಕ ವರದಿ ಕರಡು ಪ್ರತಿಯನ್ನು ಸಿದ್ಧಪಡಿಸಿ ಕಾರ್ಯನಿರ್ವಾಹಕ ಪರಿಷತ್ತಿನ ಮಾಹಿತಿ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ. (ವಾರ್ಷಿಕ ವರದಿ ಕರಡು ಪ್ರತಿಯನ್ನು ಲಗ್ಗತಿಸಿದೆ).

:: ನಿರ್ಣಯ::

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಸಂಕ್ಷಿಪ್ತವಾಗಿ ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಪರಿಗಣಿಸಿ ಅನುಮೋದಿಸಿದರು.

**ವಿಷಯ ಸಂಖ್ಯೆ 6 :ಡಾ. ಅಬ್ದುಲ್ ಅಜೀಜ್ ಮುಲ್ಲಾ, ಸಹಾಯಕ ನಿರ್ದೇಶಕರು, ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರ, ಅವರ ಸೇವಾವಧಿಯನ್ನು ಮುಂದುವರಿಸುವ ಬಗ್ಗೆ.**

**ಪರಾಮರ್ಶನ ಟಿಪ್ಪಣಿ:**

ದಿನಾಂಕ 28-8-2020 ರಂದು ಜರುಗಿದ ಕಾರ್ಯನಿರ್ವಾಹಕ ಪರಿಷತ್ತಿನ ಅನುಮೋದನೆಯೊಂದಿಗೆ(ವಿಷಯ ಸಂಖ್ಯೆ 13), ವಿಶ್ವವಿದ್ಯಾಲಯದಲ್ಲಿ ತರಬೇತಿ ಚಟುವಟಿಕೆಗಳನ್ನು ನಡೆಸಲು ತರಬೇತಿ, ಪ್ರಕಟಣೆ ಮತ್ತು ಮೇಲ್ವಿಚಾರಣೆ ಕೇಂದ್ರದ ಸಹಾಯಕ ನಿರ್ದೇಶಕರಾಗಿ ಮಾಹೆಯಾನ ರೂ 50000/- ಸಂಭಾವನೆ ಮೇಲೆ ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದಲ್ಲಿ ಹಾಗೂ ತಾತ್ಕಾಲಿಕವಾಗಿ ಡಾ. ಅಬ್ದುಲ್ ಅಜೀಜ್ ಮುಲ್ಲಾ ಅವರನ್ನು ನೇಮಕ ಮಾಡಲಾಗಿತ್ತು. ವಿಶ್ವವಿದ್ಯಾಲಯದಲ್ಲಿ ಖಾಯಂ ನೇಮಕಾತಿಗಳು ಇನ್ನೂ ಆಗಬೇಕಾಗಿರುವುದರಿಂದ ಶ್ರೀಯುತರ ಸೇವೆಯನ್ನು ಮುಂದುವರಿಸುವುದು ಅಗತ್ಯವಾಗಿದೆ. ಇವರ ಒಂದು ವರ್ಷದ ಅವಧಿ 01-07-2021 ರಂದು ಮುಗಿದಿದೆ. ಆದುದರಿಂದ ಅವರ ಸೇವೆಯನ್ನು ಮುಂದುವರಿಸಬೇಕಿದೆ.

ಡಾ. ಅಬ್ದುಲ್ ಅಜೀಜ್ ಮುಲ್ಲಾ ಅವರ ಸೇವೆಯನ್ನು ಮುಂದುವರಿಸುವ ವಿಷಯವನ್ನು ಕಾರ್ಯನಿರ್ವಾಹಕ ಪರಿಷತ್ತಿನ ಪರಿಗಣನೆಗೆ ಹಾಗೂ ಅನುಮೋದನೆಗೆ ಮಂಡಿಸಲಾಗಿದೆ.

:: ನಿರ್ಣಯ::

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ಸಂಕ್ಷಿಪ್ತವಾಗಿ ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಪರಿಗಣಿಸಿ ಡಾ. ಅಬ್ದುಲ್ ಅಜೀಜ್ ಮುಲ್ಲಾ ಅವರ ಸೇವೆ ವಿಶ್ವವಿದ್ಯಾಲಯಕ್ಕೆ ಅವಶ್ಯವಿರುವುದರಿಂದ ನಿಯಮಾನುಸಾರ ಮುಂದುವರೆಸಲು ಅನುಮೋದಿಸಿದರು.

**ವಿಷಯ ಸಂಖ್ಯೆ 7 : ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಪ್ರದೇಶದಲ್ಲಿ ಕೈಗೊಳ್ಳಲಾಗಿರುವ ಸಮಗ್ರ ಪಶುಸಂಗೋಪನೆ ಯೋಜನೆಯ, ಚಟುವಟಿಕೆಗಳ ಖರ್ಚು ವೆಚ್ಚಕ್ಕಾಗಿ ತಾತ್ಕಾಲಿಕವಾಗಿ ಖಾಯಂ ಮುಂಗಡ ಹಣ ಹೊಂದುವ ಕುರಿತು.**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಅಧಿನಿಯಮ, 2016ರನ್ವಯ ಪ್ರಕರಣಗಳ ಸಂಖ್ಯೆ 42, 44, 46, 50, 52 ಮತ್ತು 54 ಗಳಲ್ಲಿ ವಿವರಿಸಿದಂತೆ ಸಮಗ್ರ ಕೃಷಿ ವ್ಯವಸ್ಥೆ ಮಾರ್ಗದ (ಕೃಷಿ – ತೋಟಗಾರಿಕೆ – ವೃಕ್ಷ ಕೃಷಿ – ಪಶುಸಂಗೋಪನೆ) ಮುಖಾಂತರ ವಿವೇಕಯುತ ಪ್ರಾಕೃತಿಕ ಸಂಪನ್ಮೂಲ ನಿರ್ವಹಣಾ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹಾಗೂ ಕೃಷಿ

ಜಮೀನಿನಲ್ಲಿ ಹಣ್ಣು, ಆಹಾರ ಮತ್ತು ಔಷಧೀಯ ಸುಗಂಧ ಮೂಲಿಕೆಗಳಿಗೆ ಬೇಡಿಕೆಯಿರುವ ಕಾರಣ, ವಿಶ್ವವಿದ್ಯಾಲಯದ ವತಿಯಿಂದ ಕೃಷಿಕರಿಗೆ ಗಿಡಮರಗಳನ್ನು ಬೆಳೆಸಲು,ಸಮಗ್ರ ಪಶುಸಂಗೋಪನೆ ಉತ್ತೇಜಿಸುವುದು ಮತ್ತು ಜೈವಿಕ ವೈವಿಧ್ಯತೆಯನ್ನು ನಿರ್ವಹಿಸುವ ಮುಖಾಂತರ ಕೃಷಿ ಉತ್ಪಾದನೆಯನ್ನು ಉತ್ತಮಗೊಳಿಸಲು ನೀತಿಯನ್ನು ರೂಪಿಸುವುದು ಹಾಗೂ ಆಚರಣೆಗಳನ್ನು ಉತ್ತೇಜಿಸುವುದು ವಿಶ್ವವಿದ್ಯಾಲಯದ ಗುರಿಯಾಗಿರುತ್ತದೆ. ಆದುದರಿಂದ ವಿಶ್ವವಿದ್ಯಾಲಯದ ಜಮೀನಿನಲ್ಲಿ ಕೃಷಿ, ತೋಟಗಾರಿಕೆಗೆ ಸಂಬಂಧಪಟ್ಟ ಚಟುವಟಿಕೆಗಳನ್ನು ಕೈಗೊಂಡಿದ್ದು ಅದೇರೀತಿ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಪ್ರದೇಶದಲ್ಲಿ ಕೈಗೊಳ್ಳಲಾಗಿರುವ ಸಮಗ್ರ ಪಶುಸಂಗೋಪನೆ ಯೋಜನೆಯು ಆರಂಭಗೊಂಡಿದ್ದು ಈಗಾಗಲೇ ಹಲವು ಚಟುವಟಿಕೆಗಳನ್ನು ಕೈಗೊಳ್ಳಲಾಗಿದೆ. ವಿಶ್ವವಿದ್ಯಾಲಯದ ಸಮಗ್ರ ಪಶುಸಂಗೋಪನೆ ಯೋಜನೆಯ ದೇಶಿ ಗೋಶಾಲೆ ಹಾಗೂ ಜೈವಿಕ ಇಂದನ ವಿಭಾಗಗಳನ್ನು ಪ್ರಸ್ತುತ ಸಂಯೋಜನೆ ಮಾಡುತ್ತಿರುವ ಸಂಯೊಜಕರಿಗೆ ದೈನಂದಿನ ಖರ್ಚುಗಳ ನಿರ್ವಹಣೆಗೆ ಗುತ್ತಿಗೆ ಆಧಾರದ ಮೇರೆಗೆ ಕಾರ್ಯನಿರ್ವಹಿಸುತ್ತಿರುವ ಸಂಯೋಜಕರಿಗೆ ಖಾಯಂ ಮುಂಗಡ ಹೊಂದುವುದು ಅವಶ್ಯವಿರುವುದರಿಂದ ಅದನ್ನು ಮಂಜೂರು ಮಾಡಬೇಕಾಗಿರುತ್ತದೆ. ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಸದರಿ ವಿಷಯದ ಬಗ್ಗೆ ಮಾನ್ಯ ಕುಲಪತಿಗಳು ವಿವರಿಸಿದರು. ಹಣಕಾಸು ಅಧಿಕಾರಿಗಳು, ಸದರಿ ಮೊತ್ತವನ್ನು ಸಾದಿಲ್ವಾರು ವೆಚ್ಚದ ಕೈಪಿಡಿಯ ನಿಯಮಗಳಂತೆ ನಿರ್ವಹಿಸಲಾಗುವುದು ಎಂದು ತಿಳಿಸಿದರು. ಪ್ರೊ. ರಾಜೇಂದ್ರ ಪ್ರಸಾದ ಅವರು ಮಾತನಾಡುತ್ತ, ಖಾಯಂ ಮುಂಗಡ ಮೊತ್ತವನ್ನು ಅವಶ್ಯಕತೆಗೆ ಅನುಗುಣವಾಗಿ, ಯಾವ ಸಿಬ್ಬಂದಿಗಳಿಗೆ ಬೇಕಾಗುತ್ತದೋ ಅಂತಹವರಿಗೆ ಕುಲಪತಿಗಳ ಹಂತದಲ್ಲಿಯೇ ತೀರ್ಮಾನ ತೆಗೆದುಕೊಂಡು ನೀಡಬಹುದು ಎಂದು ವಿವರಿಸಿದರು. ಕಾರ್ಯನಿರ್ವಾಹಕ ಪರಿಷತ್ತಿನ ಸದಸ್ಯರು ಸದರಿ ವಿಷಯವನ್ನು ಪರಿಗಣಿಸಿ ವಿಶ್ವವಿದ್ಯಾಲಯದ ಸಮಗ್ರ ಪಶುಸಂಗೋಪನೆ ಯೋಜನೆಯ ದೇಶಿ ಗೋಶಾಲೆ ಹಾಗೂ ಜೈವಿಕ ಇಂದನ ವಿಭಾಗಗಳನ್ನು ಪ್ರಸ್ತುತ ಸಂಯೋಜನೆ ಮಾಡುತ್ತಿರುವ ಸಂಯೊಜಕರಿಗೆ ಯೋಜನೆಯ ದೈನಂದಿನ ಖರ್ಚುಗಳ ನಿರ್ವಹಣೆಗೆ ರೂ.15000/-(ರೂಪಾಯಿ ಹದಿನೈದು ಸಾವಿರ)ಖಾಯಂ ಮುಂಗಡ ಹಣ ನೀಡಲು ಅನುಮೋದಿಸಿದರು.

**ವಿಷಯ ಸಂಖ್ಯೆ 8 : ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಪ್ರದೇಶದಲ್ಲಿ ನಿರ್ಮಾಣಗೊಳ್ಳುತ್ತಿರುವ ವಿವಿಧ ಕಟ್ಟಡಗಳ ಕಾಮಗಾರಿಗಳು ಪೂರ್ಣಗೊಳ್ಳುತ್ತಿದ್ದು, ಸದರಿ ಕಟ್ಟಡಗಳ ಲೋಕಾರ್ಪಣೆಯ ದಿನಾಂಕ ನಿಗದಿಪಡಿಸುವ ಕುರಿತು.**

**ಪರಾಮರ್ಶನ ಟಿಪ್ಪಣಿ**

ವಿಶ್ವವಿದ್ಯಾಲಯದ ಸ್ಥಾಪನೆಗಾಗಿ ನಾಗಾವಿ, ಮಲ್ಲಸಮುದ್ರ ಹಾಗೂ ಕಳಸಾಪೂರ ಗ್ರಾಮಗಳ ವ್ಯಾಪ್ತಿಯ ಜಮೀನನ್ನು ಸರ್ಕಾರದಿಂದ ಗುರುತಿಸಲಾಗಿದೆ. ಅವುಗಳಲ್ಲಿ ಪ್ರಸ್ತುತ ಒಟ್ಟು 8 ಕಟ್ಟಡಗಳಲ್ಲಿ 2 ಕಟ್ಟಡಗಳು 1. ಭೋಜನಾ ನಿಲಯ ಹಾಗೂ 2. ಸಬರಮತಿ ಆಶ್ರಮದ ಪ್ರತಿಕೃತಿ ಕಟ್ಟಡಗಳು ದಿನಾಂಕ: 11-11-2020 ರಂದು ಲೋಕಾರ್ಪಗೊಂಡಿರುತ್ತವೆ. ಇನ್ನುಳಿದ 6 ಕಟ್ಟಡಗಳಾದ ಶಾಲಾ ಕಟ್ಟಡ SB-1, ಬಾಲಕರ ವಸತಿ ನಿಲಯ ಬ್ಲಾಕ್-1, ಬಾಲಕಿಯರ ವಸತಿ ನೀಲಯ-1, ತರಬೇತಿ ಕೇಂದ್ರ, 'ಸಿ' ಟೈಪ್ ಮತ್ತು 'ಡಿ' ಟೈಪ್ ಕ್ವಾಟ್ರಸ್ ಕಟ್ಟಡಗಳ ನಿರ್ಮಾಣದ ಕಾಮಗಾರಿಗಳು ಮುಕ್ತಾಯದ ಹಂತದಲ್ಲಿದ್ದು, ಶೀಘ್ರದಲ್ಲಿ

ಲೋಕಾರ್ಪಣೆಗೊಳಿಸಲು ದಿನಾಂಕವನ್ನು ನಿಗದಿಪಡಿಸಲು ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್‌ನ ಸಭೆಯ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

**:: ನಿರ್ಣಯ::**

ಸದರಿ ವಿಷಯವನ್ನು ಪ್ರಸ್ತುತಪಡಿಸುತ್ತ, ಕುಲಪತಿಗಳು ಸಭೆಯ ಸಲಹೆಗಳನ್ನು ಕೋರಿದರು. ಪ್ರಕಾಶ ಭಟ್ ಹಾಗೂ ಜಿ.ಬಿ.ಶಿವರಾಜು ಇವರು, 15/8/2021 ರ ವರೆಗೆ ಯಾವುದಾದರೂ ಕಟ್ಟಡ ಉದ್ಘಾಟನೆ ಮಾಡಬಹುದೇ ಎಂದು ಕೇಳಿದರು. ಅದಕ್ಕೆ ಕಾರ್ಯನಿರ್ವಾಹಕ ಅಭಿಯಂತರರು, ಕೋವಿಡ್ ಪರಿಸ್ಥಿತಿಯಿಂದಾಗಿ, ಮೂರು ತಿಂಗಳ ವಿಸ್ತರಣೆಯನ್ನು ನೀಡಲು ಕಾಮಗಾರಿ ಸಮಿತಿಯಲ್ಲಿ ಅನುಮೋದಿಸಲಾಗಿರುತ್ತದೆ. ಅಕ್ಟೋಬರ್ ಹೊತ್ತಿಗೆ, ಪೂರ್ಣವಾಗಬಹುದು ಎಂದು ವಿವರಿಸಿದರು. ಕುಲಪತಿಗಳು ವಿಜಯ ದಶಮಿ ಹಬ್ಬದ ಸಮಯದಲ್ಲಿ ಉದ್ಘಾಟಣೆಗೆ ಅಣಿಗೊಳಿಸಬಹುದಾಗಿ ತಿಳಿಸಿದರು. ಪ್ರೊ.ಟಿ ವಿ ಕಟ್ಟಿಮನಿ ಇವರು, ತರಬೇತಿ ಕೇಂದ್ರ ಕಟ್ಟಡದ ಪೀಠೋಪಕರಣ ಇತ್ಯಾದಿಗಳನ್ನು ಆದಷ್ಟು ಶೀಘ್ರದಲ್ಲಿ ಒದಗಿಸಿ ಸಜ್ಜುಗೊಳಿಸಿಕೊಂಡು ಉದ್ಘಾಟಣೆ ಯಾವುದಾದರೂ ಸೂಕ್ತ ಸಮಯದಲ್ಲಿ ಮಾಡಲು ಕೋರಿದರು. ಜೊತೆಗೆ, ಪ್ರಸ್ತುತ ಇರುವ ಪೀಠೋಪಕರಣಗಳೊಂದಿಗೆ ಸ್ಥಳಾಂತರಗೊಂಡು, ಮುಂದೆ ಹೆಚ್ಚುವರಿ ಪೀಠೋಪಕರಣಗಳ ಖರೀದಿ ಪ್ರಕ್ರಿಯೆ ಪ್ರಾರಂಭಿಸಲು ತಿಳಿಸಿದರು. ಹಣಕಾಸು ಅಧಿಕಾರಿಗಳು, ಹಲವು ಪೀಠೋಪಕರಣಗಳನ್ನು ಕೆ.ಟಿ.ಪಿ.ಪಿ ನಿಯಮಗಳಡಿ 4(ಜಿ) ರಿಯಾಯಿತಿ ಹೊಂದಿರುವ ಅರಣ್ಯ ಇಲಾಖೆ ಹಾಗೂ ಇತರೆ ಸರ್ಕಾರಿ/ಅರೆ ಸರ್ಕಾರಿ ಸ್ವಾಮ್ಯ ಸಂಸ್ಥೆಗಳಿಂದ/ಜೆಮ್/ಟೆಂಡರ್ ಮುಖಾಂತರ ಹಂತ ಹಂತವಾಗಿ ಖರೀದಿಸಬಹುದಾಗಿದೆ ಎಂದು ವಿವರಿಸಿದರು. ಪ್ರೊ. ರಾಜೇಂದ್ರ ಪ್ರಸಾದ ಇವರು ಮಾತನಾಡುತ್ತ, ಸದರಿ ಪ್ರಕ್ರಿಯೆ ಪೂರ್ಣಗೊಳಿಸಲು ಸಮಯಾವಕಾಶ ಬೇಕಾಗುವುದರಿಂದ, ಶೀಘ್ರದಲ್ಲಿ ಕ್ರಮ ಜರುಗಿಸಲು ತಿಳಿಸಿದರು. ಜೊತೆಗೆ, ಸದರಿ ಕಟ್ಟಡಗಳ ಪರಿಸರ ಹಾಗೂ ಸೌಂದರೀಕರಣವನ್ನು ಕಾಪಾಡಲು, ಅದಕ್ಕೆ ಹೊಂದುವಂತಹ ಪೀಠೋಪಕರಣ ಇತ್ಯಾದಿಗಳನ್ನು ಸಜ್ಜುಗೊಳಿಸಲು ತಿಳಿಸಿದರು. ಕುಲಪತಿಗಳು ಸದರಿ ಪ್ರಕ್ರಿಯೆ ವೇಗಗೊಳಿಸಲು ಸೂಕ್ತ ಕ್ರಮ ಜರುಗಿಸಲು ಸಂಬಂಧಪಟ್ಟವರಿಗೆ ತಿಳಿಸಿ ಅದರಂತೆ ಕಾರ್ಯನಿರ್ವಹಿಸಲಾಗುವುದು ಎಂದು ಸಭೆಗೆ ವಿವರಿಸಿದರು.

ಸದರಿ ಪ್ರಸ್ತಾವನೆಯನ್ನು ಕಾರ್ಯನಿರ್ವಾಹಕ ಪರಿಷತ್‌ನ ಸಭೆಯ ಪರಿಗಣಿಸಿ ಶೀಘ್ರದಲ್ಲಿ ಕಟ್ಟಡಗಳ ಉದ್ಘಾಟಣೆ ಕೈಗೊಳ್ಳಲು ಅನುಮೋದಿಸಿತು.

**ವಿಷಯ ಸಂಖ್ಯೆ 9: ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ಗೆ ಶೀರೋನಾಮ ನೀಡುವುದು ಹಾಗೂ ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್ ಪ್ರದೇಶದಲ್ಲಿ ನಿರ್ಮಾಣಗೊಳ್ಳುತ್ತಿರುವ ವಿವಿಧ ಕಟ್ಟಡಗಳಲ್ಲಿ ಸ್ಥಳಾಂತರಗೊಳ್ಳುವ ಕುರಿತು.**

**ಪರಾಮರ್ಶನ ಟಿಪ್ಪಣಿ:**

ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯವು ಗದಗ ತಾಲ್ಲೂಕಿನ ನಾಗಾವಿ, ಮಲ್ಲಸಮುದ್ರ ಹಾಗೂ ಕಳಸಾಪೂರ ಗ್ರಾಮಗಳ ವ್ಯಾಪ್ತಿಯಲ್ಲಿ ನೂತನ ಕ್ಯಾಪಂಸ್‌ನ್ನು

ನಿರ್ಮಿಸಲಾಗುತ್ತಿದ್ದು, ವಿಶ್ವವಿದ್ಯಾಲಯದಲ್ಲಿ ARTE(Academic, Research, Training and Extension) ರೀತಿಯ ಗ್ರಾಮೀಣಾಭಿವೃದ್ಧಿಗೆ ಸಂಬಂಧಿಸಿದ ವಿಸ್ತರಣಾ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಲಾಗಿದೆ. ಇಂತಹ ವಿಶಿಷ್ಟ ಮತ್ತು ವೈಶಿಷ್ಟವಾದ ವಿಶ್ವವಿದ್ಯಾಲಯಕ್ಕೆ ಶಿರೋನಾಮೆಯನ್ನು ನೀಡುವುದು ಅವಶ್ಯವಾಗಿರುತ್ತದೆ. ಆದುದರಿಂದ ಈ ಸುಂದರವಾದ ಹಾಗೂ ಭವ್ಯವಾದ ವಿಶ್ವವಿದ್ಯಾಲಯದ ಕ್ಯಾಂಪಸ್‌ಗೆ ಶಿರೋನಾಮವನ್ನು ಸೂಚಿಸುವುದು.

ಇದರ ಜೊತೆಗೆ ವಿಶ್ವವಿದ್ಯಾಲಯವನ್ನು ಗದಗ ನಗರದಲ್ಲಿ 2017-18 ನೇ ಸಾಲಿನಿಂದ ಪ್ರಾರಂಭಿಸಿದ್ದು, ವಿಶ್ವವಿದ್ಯಾಲಯವು ತನ್ನದೇ ಆದ ಸ್ವಂತ ಕಟ್ಟಡ ಇಲ್ಲದಿರುವುದರಿಂದ ನಗರದ ಹಲವು ಕಟ್ಟಡಗಳನ್ನು ಬಾಡಿಗೆಗೆ ಪಡೆದುಕೊಂಡು ಕಾರ್ಯನಿರ್ವಹಿಸುತ್ತಿರುತ್ತದೆ. ಮುಂದುವರೆದು, ವಿಶ್ವವಿದ್ಯಾಲಯವು ತನ್ನದೇ ಆದ ನೂತನ ಕ್ಯಾಂಪಸ್‌ನಲ್ಲಿ ಒಟ್ಟು 8 ಕಟ್ಟಡಗಳನ್ನು ನಿರ್ಮಿಸುತ್ತಿದ್ದು, ಸದರಿ ಕಟ್ಟಡ ಕಾಮಗಾರಿಗಳು ಅಂತಿಮ ಹಂತದಲ್ಲಿದ್ದು, ಕಟ್ಟಡಗಳು ಲೋಕಾರ್ಪಣೆಗೊಂಡ ನಂತರ ವಿಶ್ವವಿದ್ಯಾಲಯದ ಹಲವು ವಿಭಾಗಗಳನ್ನು ಮತ್ತು ತರಗತಿಗಳನ್ನು ನೂತನ ಕ್ಯಾಂಪಸ್‌ಗೆ ಸ್ಥಳಾಂತರಗೊಳಿಸಬೇಕಾಗಿರುತ್ತದೆ.

ಸದರಿ ಪ್ರಸ್ತಾವನೆಗಳ ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಪರಿಗಣನೆ ಮತ್ತು ಅನುಮೋದನೆಗಾಗಿ ಮಂಡಿಸಲಾಗಿದೆ.

:: ನಿರ್ಣಯ::

ಸದರಿ ವಿಷಯವನ್ನು ವಿವರಿಸುತ್ತ, ಕುಲಪತಿಗಳು ಸಭೆಯ ಸಲಹೆಗಳನ್ನು ಕೋರಿದರು. ಶ್ರೀ ಜಿ ಬಿ ಶಿವರಾಜು ಇವರು ಮಾತನಾಡುತ್ತ, ವಿಶ್ವವಿದ್ಯಾಲಯದ ನೂತನ ಕ್ಯಾಂಪಸ್‌ಗೆ **"ಗಾಂಧೀ ಗ್ರಾಮ ಗಂಗೋತ್ರಿ"** ಎಂಬ ಹೆಸರನ್ನು ಸೂಚಿಸಿದರು. ಇದಕ್ಕೆ ಪ್ರೊ ಟಿ ವಿ ಕಟ್ಟಿಮನಿ ಹಾಗೂ ಪ್ರೊ ಹಣಮಂತರಾಯಪ್ಪ ಇವರು ಸದರಿ ಹೆಸರು ಚೆನ್ನಾಗಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಶ್ರೀ ಪ್ರಕಾಶ ಭಟ್ ಇವರು ಸದರ ಹೆಸರು ಒಪ್ಪಬಹುದಾಗಿದೆ ಎಂದು ತಿಳಿಸಿದರು. ಪ್ರೊ. ರಾಜೇಂದ್ರ ಪ್ರಸಾದ ಇವರು ಹೆಸರು ಸೂಕ್ತವಾಗಿರುವುದಾಗಿ ತಿಳಿಸಿದರು. ಪ್ರೊ ಆರ್ ಎಸ್ ದೇಶ್ಪಾಂಡೆ ಇವರು, ಅಭ್ಯಂತರವಿಲ್ಲವಿರುವುದಾಗಿ ಹೇಳಿದರು. ಕುಲಪತಿಗಳು ಸದರಿ ವಿಷಯದ ಕುರಿತು ವ್ಯಾಕರಣ ಶಬ್ದನಾಮಾವಳಿ ಕನ್ನಡ ಶಾಸ್ತ್ರೀಯತೆ ಇತ್ಯಾದಿ ಅಂಶಗಳನ್ನು ಪರಿಗಣಿಸಿ ಸೂಕ್ತ ಶಿರೋನಾಮೆ ನೀಡಬಹುದಾಗಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಸದರಿ ಪ್ರಸ್ತಾವನೆಗಳನ್ನು ಕಾರ್ಯನಿರ್ವಾಹಕ ಪರಿಷತ್ತಿನ ಸಭೆಯ ಪರಿಗಣಿಸಿ ಅದರಂತೆ ಸೂಕ್ತ ಕ್ರಮ ಜರುಗಿಸಲು ಅನುಮೋದಿಸಿತು.

**ವಿಷಯ ಸಂಖ್ಯೆ 10 : ಹೊಸ ಶಿಕ್ಷಣ ನೀತಿ 2020 ರನ್ವಯ ವಿಶ್ವವಿದ್ಯಾಲಯದಲ್ಲಿ ಹೊಸ ಸ್ನಾತಕ ಪದವಿ ಕೋರ್ಸಗಳನ್ನು ಪ್ರಾರಂಭಿಸುವ ಕುರಿತು.**

**Agenda 10: To consider and approve instituting of Undergraduate programme as per the New Education Policy-2020.**

ಪರಾಮರ್ಶನ ಟಿಪ್ಪಣಿ:

**Reference Note:**

The Karnataka State Rural Development and Panchayat Raj University has started functioning from the academic year 2017-18.

To begin with the University has started the following five Postgraduate Programmes form the academic year 2017-18.

1. M.B.A. (Rural Management /Agribusiness Management
2. M.A. in Rural Development & Panchayat Raj/ Co-operative Management
3. M.S.W. (Community Development / Rural Reconstruction / Community Health)
4. M.Sc. in Geoinformatics (Remote Sensing and GIS)
5. M.Com. (Entrepreneurship / Co-operative Management)

During the academic year 2018-19 two more new Postgraduate Programmes were introduced.

1. M.P.H. (Master of Public Health)
2. M.Sc. in Food Science & Technology

During the academic year 2019-20 Following additional new Postgraduate Programmes have been started.

1. M.Sc. in Computer Science (Data Analytics)
2. M.A. in Public Administration
3. M.A. in Economics (Development Economics)

As per NEP 2020 "a University or Higher Education Institution will mean a multi-disciplinary institution of higher learning that offers Under Graduate and Graduate Programmes with high quality teaching research and community engagement".

Further, it is proposed to start new Under Graduate Programmes from the academic year 2021-22 as per the Karnataka State Rural Development and Panchayat Raj University act 2016, Sec 4 (2) (iii), which reads "to start courses leading to award of Doctorates, post Doctorates, post graduates, graduates, Diploma and certificate holders with an interdisciplinary and integrated base to design solution for the complex and diverse issues of rural development". As per this the Bachelor degree programmes would be commenced and the nomenclature for the same would be according to the UGC and Government of Karnataka guidelines / Circulars. Suitable Ordinance would be prepared as per the Section 57 (1) (b) of the Karnataka State Rural Development and Panchayat Raj University Act and submitted to competent authorities for the approval.

The following are the tentative Bachelor degree programmes proposed to be initiated –

1. Bachelors in Agribusiness Management
2. Bachelors in Rural Development and Governance
3. Bachelors in Food Science and Technology
4. Bachelors in Geoinformatics
5. Bachelors in Public Health
6. Bachelors in Entrepreneurship/ Cooperative Management
7. Bachelors in Computer Science

A committee would be constituted to frame the requisite ordinances / Guidelines to carry out the same.

The matter is placed before the Executive Council for the kind consideration, suggestions and approval.

**:: Resolution ::**

Honble Vice Chancellor explained in detail, the proposal of instituting the Bachelors Programs as per New Education Policy in the coming Academic Year and the work being carried out in association with various organizations to implement the same. It was further informed that, the University had the mandate to introduce new Bachelors Programs under the provisions of the KSRDPRU Act. The same may be accomplished considering various factors such as capacity of the sanctioned posts, expertise, resources etc. He sought the suggestions of the members for carrying out the same.

The various suggestions opined by the Executive Council Members are as under:

**Dr.Rajendra Prasad:**

- Suggested that University should Start Under Graduate Programme based on priority.
- University could start below Under Graduate Programme:

1. Bachelors in Agribusiness Management
2. Bachelors in Rural Development and Governance
3. Bachelors in Food Science and Technology
4. Bachelors in Entrepreneurship/ Cooperative Management.

- Further he expressed, the UG Programme should attract students by focussing on ideology and objectives of University.
- He also said NEP-2020 has multiple options for students for entry and exit for various programme.

**Dr. Arun Patil:**

- He opined that the University should introduce Programmes which have better potential and which can make students employable. It may be considered to commence UG programmes on existing expertise like that of FST, GIS and Computer Science.
- Further he suggested, University should fine tune the courses pertaining to rural development, introduce applied concepts and make them application oriented.
- Also expressed that UG Programmes should attract the students and make the University sustainable, thereby maintaining a balance of focussing on Ideology as well as not forgetting practicality.

**Prof. G.B.Shivaraju:**

- He suggested that focus should be on Rural Development in tune with the vision and mission of the University.
- The University ought to make efforts in maintaining its unique specialised character and should refrain from being any other conventional university.

**Dr. Prakash Bhat:**

- He opined that stress should be on rural sector and rural development. University should include Rural people for improvement of rural skill set for University students.
- Also suggested that, the University may keep in mind two questions before commencing the UG programmes, one, does it focus on RDPR and second, would the students concern of employability is addressed.
- Further, he informed that, the University should play a pivotal role in mentoring students to go to rural areas for the development of the same.

**Dr. Hanmantarayappa:**

- He opined that UG and PG programmes may go hand in hand.
- The University should consider the availability of resources, infrastructure and other related aspects and take asuitable step based on these considerations.

**Prof.T.V.Kattimani:**

- He informed that the University was on right track in commencing the Under Graduate Programme.

- Under NEP-2020 the content/syllabi of the subjects could be so designed so as to find solutions to the current and future challenges. The University could engage subject experts from any part of the country and also syllabus may be designed accordingly.
- He opined that University would become a knowledge Junction or Hub to the students to upgrade their skills, by introducing the Under Graduate Programme on the basis of NEP-2020.
- He suggested that University should include contents on Cold Storage Management, Logistic Management and Supply Chain Management which not only helps farmers and Agri based industry but also are in great demand.
- He also expressed new UG Programme should focus on Core areas thereby promoting sustainability.
- He suggested that areas on Public Health and Sanitation, Water consumption and regeneration, Big data analytics etc should also be emphasized upon.
- He expressed that NEP 2020 is to be received with an open mind and heart. Measures should be taken so as to ensure that the younger generation reaps its benefit.

**Dr.R.S.Deshpande:**

- He emphasised that, efforts should be made to design the curriculum of UG Programme such that, they enhance village life and make it more attractive.
- Besides focusing on the employability, decentralised governance and rural development which are the spirit of establishment of the University should also be focussed on.
- University should commence Programmes so that students get attracted to village life.
- He opined that, though Development of curriculum/ Syllabus may be focussed on RDPR but knowledge content should not be incidental.
- Further, he expressed that University should give importance on Agri Technology/ Agri marketing and allied programmes, decentralised institutions and rural governance which would make the journey of transitioning from India to Bharat, a smoother and effective one.

**Hon'ble Vice Chancelor:**

In the concluding remarks the Vice Chancellor brought the following to the notice of the august gathering:

- He reiterated that the University would commence UG programmes as per the University Act.

- He expressed that currently, approximately 400 students were pursuing their PG programmes and therefore to widen the education base, there was a need to commence the UG Programmes.
- He informed that the discussions held in Academic Council and Executive Council would be considered while presenting for the Press Conference and also while designing the multi disciplinary course content/syllabi for the UG Programmes.
- He clarified the Committee that, the Course/Programmes have not yet been finalised and that content would not be deviated from the focus on RDPR.
- Emphasises would be on skill development, entrepreneurship for rural areas and there would be a flexible approach while designing UG programmes, which protects the interests of everyone in the best possible way.
- UG education would be taken up considering the limitations, student's aspirations/demand while adhering to the University's focus.
